10

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 201
ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ. ಎಂ.
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 14.02.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಶಕ್ತಿ ಯೋಜನೆಯು ಜಾರಿಗೆ ಬಂದಾಗಿನಿಂದ ಇಲ್ಲಿಯವರೆಗೆ ಪ್ರಯಾಣಿಸಿದ ಫಲಾನುಭವಿಗಳೆಷ್ಟು; (ತಿಂಗಳುವಾರು ಮಾಹಿತಿ ನೀಡುವುದು). | ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಶಕ್ತಿ ಯೋಜನೆಯು ಜಾರಿಗೆ ಬಂದ ದಿನಾಂಕ:11.06.2023 ರಿಂದ ದಿನಾಂಕ:31.01.2024ರವರೆಗೆ ಒಟ್ಟು 14563.21 ಲಕ್ಷಗಳ ಫಲಾನುಭವಿಗಳು ಪ್ರಯಾಣಿಸಿರುತ್ತಾರೆ.<br><br>ಮಾಹೆವಾರು ವಿವರವನ್ನು **ಅನುಬಂಧ 'ಅ'** ದಲ್ಲಿ ನೀಡಲಾಗಿದೆ. |
| ಆ. | ಶಕ್ತಿ ಯೋಜನೆಯಲ್ಲಿ ಸಾರಿಗೆ ಇಲಾಖೆಯು ನೀಡಿದ ಎಷ್ಟು ಮೊತ್ತದ ಟಿಕೆಟ್ ಹಂಚಲಾಗಿದೆ; ಸರ್ಕಾರ ಸಾರಿಗೆ ಇಲಾಖೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು; ಬಾಕಿಯಿರುವ ಅನುದಾನವೆಷ್ಟು; (ತಿಂಗಳುವಾರು, ನಿಗಮವಾರು ವಿವರ ನೀಡುವುದು) | ಶಕ್ತಿ ಯೋಜನೆ ಜಾರಿ ಬಂದಾಗಿನಿಂದ ಜೂನ್-2023ರಿಂದ ಫೆಬ್ರುವರಿ-2024ರ ಮಾಹೆಗಳಿಗೆ ಒಟ್ಟಾರೆ ರೂ.255366.99 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದ್ದು, ಪ್ರತಿ ತಿಂಗಳು ನಿಗಮವಾರು ಬಿಡುಗಡೆಗೊಳಿಸಲಾದ ಅನುದಾನ ಹಾಗೂ ಕೊರತೆ ವಿವರವನ್ನು **ಅನುಬಂಧ 'ಆ'** ದಲ್ಲಿ ನೀಡಲಾಗಿದೆ. |
| ಇ. | ಸಾರಿಗೆ ಇಲಾಖೆಯು ಶಕ್ತಿ ಯೋಜನೆಯಡಿಯಲ್ಲಿ ನೀಡಿದ ಟಿಕೆಟ್‌ಗಳ ಹಣವನ್ನು ಸಕಾಲದಲ್ಲಿ ನಿಗಮಗಳಿಗೆ ಬಿಡುಗಡೆ ಮಾಡದ ಕಾರಣ ಸಾರಿಗೆ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸಕಾಲದಲ್ಲಿ ವೇತನ ಪಾವತಿಸಲಾಗದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳ ಅಧಿಕಾರಿ, ಸಿಬ್ಬಂದಿಗಳಿಗೆ ನಿಗಧಿತ ದಿನಾಂಕದಂದು ವೇತನ ಪಾವತಿ ಮಾಡಲಾಗುತ್ತಿದ್ದು, ವೇತನ ಪಾವತಿಯಲ್ಲಿ ಯಾವುದೇ ವಿಳಂಬವಿರುವುದಿಲ್ಲ.<br>ಸಾರಿಗೆ ಸಂಸ್ಥೆಗಳಿಗೆ ಫೆಬ್ರುವರಿ-2024ರ ಮಾಹೆಯ ಶಕ್ತಿ ಯೋಜನೆಯ ವೆಚ್ಚದ ಬಾಬ್ತನ್ನು ಮುಂಗಡವಾಗಿಯೇ ಬಿಡುಗಡೆಗೊಳಿಸಲಾಗಿದೆ.<br>ಜೂನ್-2023ರಿಂದ ಮಾರ್ಚ್-2024ರವರೆಗೆ ಅಂದಾಜಿಸಿರುವ ವಾಸ್ತವಿಕ ವೆಚ್ಚ ರೂ.4377.96 ಕೋಟಿಗಳಲ್ಲಿ ಪ್ರಸ್ತುತ 2023-24ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ರೂ.2800.00 ಕೋಟಿಗಳ ಅನುದಾನವನ್ನು ಹೊರತುಪಡಿಸಿ, ರೂ.1577.96 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸುವಂತೆ ಸಾರಿಗೆ ಸಂಸ್ಥೆಗಳಿಂದ ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |
| ಈ. | ಬಂದಿದ್ದಲ್ಲಿ, ಸಕಾಲದಲ್ಲಿ ಸಾರಿಗೆ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; | |



Generated from eOffice by Ravi Gothe, TD-TD1-JAI/C(RG), JUNIOR ASSISTANT, Trans on 11/11/2024 01:04 PM

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಉ. | ಶಕ್ತಿ ಯೋಜನೆಯಲ್ಲಿ ಉಚಿತವಾಗಿ ಟಿಕೆಟ್ ಪಡೆದ ಮಹಿಳಾ ಪ್ರಯಾಣಿಕರು ನಿಗಧಿತ ತಲುಪುವ ಮೊದಲೇ ಹಿಂದಿನ ನಿಲ್ದಾಣಗಳಲ್ಲಿ ಇಳಿಯುವುದರಿಂದ, ನಿರ್ವಾಹಕರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮವೇನು? | ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳಲ್ಲಿ ಶಕ್ತಿ ಯೋಜನೆಯಡಿಯಲ್ಲಿ ಉಚಿತವಾಗಿ ಟಿಕೆಟ್ ಪಡೆದ ಮಹಿಳಾ ಪ್ರಯಾಣಿಕರು ನಿಗದಿತ ಸ್ಥಳ ತಲುಪುವ ಮೊದಲೇ ವಾಹನದಿಂದ ಇಳಿದು ಹೋಗಿರುವ ಬಗ್ಗೆ ಯಾವುದೇ ನಿರ್ದಿಷ್ಟ ಪ್ರಕರಣಗಳು ವರದಿಯಾಗಿರುವುದಿಲ್ಲ.<br>ಆದಾಗ್ಯೂ, ಮಹಿಳಾ ಪ್ರಯಾಣಿಕರು ಪ್ರಯಾಣಿಸುವ ಸಮಯದಲ್ಲಿ ನಿರ್ದಿಷ್ಟ ಸ್ಥಳಗಳಿಗೆ ಉಚಿತ ಶೂನ್ಯ ಟಿಕೆಟ್ ಪಡೆದು ಪ್ರಯಾಣಿಸುವಂತೆ ಹಾಗೂ ನಿರ್ವಾಹಕರು ಸದರಿಯವರಿಗೆ ನಿಗದಿತ ಸ್ಥಳದ ಶೂನ್ಯ ಟಿಕೆಟ್ ವಿತರಿಸುವಂತೆ ಸೂಕ್ತ ಸೂಚನೆಗಳನ್ನು ನೀಡಲು ನಿಗಮಗಳಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು |

ಸಂಖ್ಯೆ: ಟಿಡಿ 07 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು



Generated from eOffice by Ravi Gothe, TD-TD1-JAI/C(RG), JUNIOR ASSISTANT, Trans on 11/11/2024 01:04 PM

**ಅನುಬಂಧ-ಅ**

ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಶಕ್ತಿ ಯೋಜನೆ ಜಾರಿ ಬಂದಾಗಿನಿಂದ ಜೂನ್-2023ರಿಂದ ಜನವರಿ-2024ರವರೆಗೆ ಪ್ರಯಾಣಿಸಿರುವ ಫಲಾನುಭವಿಗಳ ಸಂಖ್ಯೆ

**(ಲಕ್ಷಗಳಲ್ಲಿ)**

| ಮಾಹೆ | ಕ.ರಾ.ರ. ಸಾ.ನಿಗಮ | ಬೆಂ.ಮ.ಸಾ. ಸಂಸ್ಥೆ | ವಾ.ಕ.ರ.ಸಾ. ಸಂಸ್ಥೆ | ಕ.ಕ.ರ.ಸಾ. ನಿಗಮ | ಒಟ್ಟು |
|---|---|---|---|---|---|
| ಜೂನ್-2023 | 317.36 | 336.85 | 254.82 | 134.65 | 1043.68 |
| ಜುಲೈ-2023 | 623.46 | 641.27 | 448.02 | 260.24 | 1972.99 |
| ಆಗಸ್ಟ-2023 | 594.12 | 676.28 | 461.14 | 279.98 | 2011.52 |
| ಸೆಪ್ಟೆಂಬರ್-2023 | 581.65 | 624.86 | 442.23 | 283.06 | 1931.8 |
| ಅಕ್ಟೋಬರ್-2023 | 568.64 | 578.58 | 424.17 | 267.67 | 1839.06 |
| ನವೆಂಬರ್-2023 | 581.74 | 561.70 | 426.81 | 283.12 | 1853.37 |
| ಡಿಸೆಂಬರ್-2023 | 605.53 | 599.63 | 467.01 | 299.45 | 1971.62 |
| ಜನವರಿ-2024 | 589.04 | 598.79 | 454.57 | 296.77 | 1939.17 |
| **ಒಟ್ಟು** | **4461.54** | **4617.96** | **3378.77** | **2104.94** | **14563.21** |



Generated from eOffice by Ravi Gothe, TD-TD1-JA1/C(RG), JUNIOR ASSISTANT, Trans on 11/11/2024 01:04 PM

**ಅನುಬಂಧ-ಆ**

ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಶಕ್ತಿ ಯೋಜನೆ ಜಾರಿ ಬಂದಾಗಿನಿಂದ ಜೂನ್-2023ರಿಂದ ಫೆಬ್ರುವರಿ-2024ರವರೆಗೆ, ಪ್ರತಿ ತಿಂಗಳು ನಿಗಮವಾರು ಬಿಡುಗಡೆಗೊಳಿಸಲಾದ ಅನುದಾನ ಮತ್ತು ಕೊರತೆ ವಿವರ:-

**(ರೂ. ಲಕ್ಷಗಳಲ್ಲಿ)**

| ಕ.ರಾ.ರ.ಸಾ.ನಿಗಮ | | | |
|---|---|---|---|
| **ಮಾಹೆ** | **ವೆಚ್ಚ** | **ಬಿಡುಗಡೆಯಾದ ಮೊತ್ತ** | **ಬಾಕಿ ಮೊತ್ತ** |
| ಜೂನ್-2023 | 9430.25 | 7364.9 | 2065.35 |
| ಜುಲೈ-2023 | 17565.14 | 11076.33 | 6488.81 |
| ಆಗಸ್ಟ-2023 | 17234.75 | 10994.49 | 6240.26 |
| ಸೆಪ್ಟಂಬರ್-2023 | 16386.73 | 11073.38 | 5313.35 |
| ಅಕ್ಟೋಬರ್-2023 | 18181.01 | 10804.81 | 7376.20 |
| ನವೆಂಬರ್-2023 | 17692.07 | 11197.76 | 6494.31 |
| ಡಿಸೆಂಬರ್-2023 | 17984.13 | 11197.76 | 6786.37 |
| ಜನವರಿ-2024 | 17291.35 | 11960.54 | 5330.81 |
| ಫೆಬ್ರುವರಿ-2024 | - | 11158.85 | - |
| **ಒಟ್ಟು** | **131765.43** | **96828.82** | **46095.46** |

| ಬೆಂ.ಮ.ಸಾ.ಸಂಸ್ಥೆ | | | |
|---|---|---|---|
| **ಮಾಹೆ** | **ವೆಚ್ಚ** | **ಬಿಡುಗಡೆಯಾದ ಮೊತ್ತ** | **ಬಾಕಿ ಮೊತ್ತ** |
| ಜೂನ್-2023 | 4370.21 | 3413.07 | 957.14 |
| ಜುಲೈ-2023 | 8201.54 | 5131.42 | 3070.12 |
| ಆಗಸ್ಟ-2023 | 8590.24 | 5479.93 | 3110.31 |
| ಸೆಪ್ಟಂಬರ್-2023 | 7888.91 | 5364.27 | 2524.64 |
| ಅಕ್ಟೋಬರ್-2023 | 7611.31 | 5195.91 | 2415.40 |
| ನವೆಂಬರ್-2023 | 7444.29 | 4880.48 | 2563.81 |
| ಡಿಸೆಂಬರ್-2023 | 7915.30 | 4880.48 | 3034.82 |
| ಜನವರಿ-2024 | 8049.79 | 4444.68 | 3605.11 |
| ಫೆಬ್ರುವರಿ-2024 | - | 4910.37 | - |
| **ಒಟ್ಟು** | | **43700.61** | **21281.35** |

| ವಾ.ಕ.ರ.ಸಾ.ಸಂಸ್ಥೆ | | | |
|---|---|---|---|
| **ಮಾಹೆ** | **ವೆಚ್ಚ** | **ಬಿಡುಗಡೆಯಾದ ಮೊತ್ತ** | **ಬಾಕಿ ಮೊತ್ತ** |
| ಜೂನ್-2023 | 6515.18 | 5088.27 | 1426.91 |
| ಜುಲೈ-2023 | 11178.01 | 7651.45 | 3526.56 |
| ಆಗಸ್ಟ-2023 | 11542.12 | 7363.02 | 4179.10 |
| ಸೆಪ್ಟಂಬರ್-2023 | 11279.56 | 7005.97 | 4273.59 |
| ಅಕ್ಟೋಬರ್-2023 | 11606.31 | 7435.94 | 4170.37 |
| ನವೆಂಬರ್-2023 | 11005.37 | 7201.81 | 3803.56 |
| ಡಿಸೆಂಬರ್-2023 | 11808.20 | 7201.81 | 4606.39 |
| ಜನವರಿ-2024 | 11268.17 | 7209.34 | 4058.83 |
| ಫೆಬ್ರುವರಿ-2024 | - | 7327.24 | - |
| **ಒಟ್ಟು** | **86202.92** | **63484.85** | **30045.31** |



Generated from eOffice by Ravi Gothe, TD-TD1-JAI/C(RG), JUNIOR ASSISTANT, Trans on 11/11/2024 01:04 PM

(ರೂ.ಲಕ್ಷಗಳಲ್ಲಿ)

| ಕ.ಕ.ರ.ಸಾ.ನಿಗಮ | | | |
|---|---|---|---|
| **ಮಾಹೆ** | **ವೆಚ್ಚ** | **ಬಿಡುಗಡೆಯಾದ ಮೊತ್ತ** | **ಬಾಕಿ ಮೊತ್ತ** |
| ಜೂನ್-2023 | 4780.80 | 3733.75 | 1047.05 |
| ಜುಲೈ-2023 | 8713.96 | 5614.8 | 3099.16 |
| ಆಗಸ್ಟ್-2023 | 8835.74 | 5636.56 | 3199.18 |
| ಸೆಪ್ಟಂಬರ್-2023 | 9120.97 | 6030.38 | 3090.59 |
| ಅಕ್ಟೋಬರ್-2023 | 9485.78 | 6012.34 | 3473.44 |
| ನವೆಂಬರ್-2023 | 9523.62 | 6193.95 | 3329.67 |
| ಡಿಸೆಂಬರ್-2023 | **9796.13** | 6193.95 | 3602.18 |
| ಜನವರಿ-2024 | **9616.45** | 5859.44 | 3757.01 |
| ಫೆಬ್ರವರಿ-2024 | - | 6077.54 | - |
| **ಒಟ್ಟು** | **69873.45** | **51352.71** | **24598.28** |